ಫೇಕ್ ರೆಕಾರ್ಡ್‌ನ್ನು ಸೃಷ್ಟಿ ಮಾಡಿ ಕೊಟ್ಟಂಥ ಅರ್ಜಿಯನ್ನು ವೆರಿಫಿಕೇಶನ್ ಕೂಡ ಮಾಡದೆ ಅವರಿಗೆ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಶಿಫ್ಟ್ ಮಾಡಲಿಕ್ಕೋಸ್ಕರವಾಗಿ ಅನುಮತಿ ನೀಡಿದ್ದಾರೆ. ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಲಕ್ಷಾಂತರ ರೂಪಾಯಿಗಳ ಹಣದ ಅವ್ಯವಹಾರವನ್ನು ಹಿಂದಿನ ಅಬಕಾರಿ ಡಿ.ಸಿ. ಮಾಡಿದ್ದಾರೆಂಬುದು ಎಲ್ಲಾ ಸಾರ್ವಜನಿಕರಿಗೂ ತಿಳಿದಿರುವಂಥ ವಿಷಯ. ಸಾರ್ವಜನಿಕರ ಪ್ರತಿಭಟನೆ ಇದ್ದಾಗಲೂ ಕೂಡ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಇಂಥ ಒಂದು ಸರ್ಕಲ್‌ನಲ್ಲಿ ಅದರಲ್ಲಿಯೂ ಪ್ರಮುಖವಾಗಿ ರೆಸಿಡೆನ್ಸ್‌ಷಿಯಲ್ ಏರಿಯಾದಲ್ಲಿ ಕೊಟ್ಟಿರುವಂಥಾದ್ದು ಬಹಳ ತಪ್ಪು ದಯಮಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಫೇಕ್ ರೆಕಾರ್ಡ್‌ನ್ನು ಕೊಟ್ಟಂಥ ಯಾವ ಅಧಿಕಾರಿ ಇದ್ದಾರೆ ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಿಂದಿನ ಯಾರು ಅಬಕಾರಿ ಡಿ.ಸಿ. ಇದ್ದರು ಈ ಫೇಕ್ ರೆಕಾರ್ಡ್‌ನ ಮೇಲೆ ಶಿಫ್ಟಿಂಗ್‌ನ್ನು ಯಾರು ಮಾಡಿದ್ದಾರೆ ಅವರನ್ನು ತತ್‌ಕ್ಷಣವೇ ಅಮಾನತ್ತಿನಲ್ಲಿಡಬೇಕು, ಮತ್ತು ಬಾರ್ ಅಂಡ್ ರೆಸ್ಟಾರೆಂಟ್‌ನ್ನು ತತ್‌ಕ್ಷಣದಿಂದಲೇ ಕ್ಲೋಸ್ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು): ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಸಂಪೂರ್ಣವಾದಂಥ ಮಾಹಿತಿಗಳು ಈಗ ಇಲ್ಲ. ಮಾನ್ಯ ಸದಸ್ಯರು ಏನು ಆರೋಪಗಳನ್ನು ಮಾಡಿದ್ದಾರೆ ಅದರ ಬಗ್ಗೆ ಸಂಪೂರ್ಣವಾದ ವಿಚಾರಣೆಯನ್ನು ಮಾಡಿ, ನಾನು ಅವರಿಗೆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎ. ರಾಮದಾಸ್: ಈ ಬಗ್ಗೆ ಒಂದು ಎನ್‌ಕ್ವಾಯರಿಯನ್ನು ಮಾಡಿ ಇಲಾಖೆಯ ಸರ್ಟಿಫಿಕೇಟನ್ನು ಫೇಕ್ ಮಾಡಿದ್ದಾರೆ. ಅದನ್ನು ವಿಚಾರಣೆಗೆ ಒಳಪಡಿಸಿ. ಡಿಪಾರ್ಟ್‌ಮೆಂಟಲ್ ಎನ್‌ಕ್ವಾಯರಿಯನ್ನಾದರೂ ಮಾಡಿ.

ಶ್ರೀ ಎಂ. ಎಂ. ನಾಣಯ್ಯ: ವಿವರಗಳನ್ನು ಪಡೆದು ತಮಗೆ ಸೂಕ್ತವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಎ. ರಾಮದಾಸ್: ನನ್ನ ಕ್ಷೇತ್ರದಲ್ಲಿ ಪ್ರಮುಖ ಸ್ಥಳದಲ್ಲಿ ಇರತಕ್ಕಂಥ ಬಾರ್ ಅಂಡ್ ರೆಸ್ಟಾರೆಂಟ್‌ನ್ನು ಕ್ಲೋಸ್ ಮಾಡಲು ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು: ಸಂಪೂರ್ಣವಾದ ಮಾಹಿತಿಗಳನ್ನು ತರಿಸಿಕೊಂಡು ತಮಗೆ ಉತ್ತರ ಕೊಡುತ್ತೇವೆ ಎಂದು ಹೇಳಿದ್ದಾರಲ್ಲವೇ?

ಶ್ರೀ ಎಂ.ಎಂ. ನಾಣಯ್ಯ: ಸನ್ಮಾನ್ಯ ಅಧ್ಯಕ್ಷರೇ, ಅದು ನಮ್ಮ ಅಬಕಾರಿ ಕಾಯಿದೆಗೆ ವಿರೋಧವಾಗಿದ್ದರೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಅದನ್ನು ಸ್ಥಳಾಂತರ ಮಾಡಲು ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು: ಮುಂದೆ ಗಮನ ಸೆಳೆಯುವ ಸೂಚನೆ.

12.40 ಪಿ.ಎಂ.

(4) ಗಮನ ಸೆಳೆಯುವ ಸೂಚನೆ

ವಿಷಯ: ರಾಷ್ಟ್ರೀಯ ಕುಟುಂಬ ಸಹಾಯಧನ ಯೋಜನೆಯಲ್ಲಿ ಸರ್ಕಾರದಿಂದ ಸಿಗುವ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಅನುದಾನ ಬಿಡುಗಡೆಯಾಗದೇ ಇರುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಅಧ್ಯಕ್ಷರೇ ರಾಷ್ಟ್ರೀಯ ಕುಟುಂಬ ಸಹಾಯಧನ ಯೋಜನೆಯಲ್ಲಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಕಳೆದ ಮೂರು ವರ್ಷಗಳಿಂದ ಅನುದಾನ ಬಿಡುಗಡೆಯಾಗದೇ ಇರುವ ಬಗ್ಗೆ ಸನ್ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಅಧ್ಯಕ್ಷರೇ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕಳೆದ ಮೂರು ವರ್ಷದಲ್ಲಿ ನಿಗದಿಯಾದ ಅನುದಾನವು ಸಂಪೂರ್ಣವಾಗಿ ಬಿಡುಗಡೆಯಾಗಿರುವುದಿಲ್ಲ. ಕೇಂದ್ರ ಸರ್ಕಾರವು ಕಳೆದ ವರ್ಷ ಈ ಕಾರ್ಯಕ್ರಮದಡಿಯಲ್ಲಿನ ಅನುದಾನವನ್ನು 649.22 ಲಕ್ಷ ರೂ.ಗಳಿಂದ 304.44 ಲಕ್ಷ ರೂ.ಗಳಿಗೆ ಇಳಿಸಿತ್ತು. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವಾಲಯವನ್ನು ಸಂಪರ್ಕಿಸಿ ಫಲಾನುಭವಿಗಳಿಗೆ ಆಗುತ್ತಿರುವ ತೊಂದರೆಯನ್ನು ವಿವರಿಸಿ ಅನುದಾನವನ್ನು 304.44 ಲಕ್ಷ ರೂ. ಗಳಿಂದ 511.45 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.

ಅನುದಾನದ ಬಿಡುಗಡೆಯಲ್ಲಿ ಕಡಿತದಿಂದಾಗಿ ಹಾಗೂ ಫಲಾನುಭವಿಗಳ ಸಂಖ್ಯೆಯಲ್ಲಿ ನಿರಂತರ ಹೆಚ್ಚಳದಿಂದಾಗಿ ರಾಜ್ಯದ 27 ಜಿಲ್ಲೆಗಳಲ್ಲಿ 2300 ಲಕ್ಷ ರೂ. ಗಳ ಬಾಕಿ ಮೊತ್ತವನ್ನು ಪಾವತಿಸಬೇಕಾಗಿದ್ದು, 1500 ಲಕ್ಷ ರೂ.ಗಳ ವಾರ್ಷಿಕ ಅನುದಾನದ ಅವಶ್ಯಕತೆ ಇರುತ್ತದೆ. ಈ ದಿಸೆಯಲ್ಲಿ, ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಂ: 196/2001 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಿಸದಿಂತೆ, ಈ ಕಾರ್ಯಕ್ರಮದಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಾಕಿಯಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅವಶ್ಯಕವಿರುವ ಜಿಲ್ಲಾವಾರು ಅನುದಾನದ ವಿವರಗಳನ್ನು ನೀಡುತ್ತಾ ಅಫಿಡೆವಿಟ್ ಸಲ್ಲಿಸಲಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ: ಅಧ್ಯಕ್ಷರೇ, ನನಗೆ ಗೊತ್ತಿತ್ತು ಈ ಉತ್ತರ ಕೊಡುತ್ತಾರೆಂದು ನಿರಂತರವಾಗಿ ಕಳೆದೆರಡು ವರ್ಷಗಳಿಂದ ನಿಮ್ಮೆಲ್ಲಾ ಕೆಲಸಕಾರ್ಯಗಳಿಂದಾಗಿ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ ಏಕೆ ಬಿಡುಗಡೆ ಮಾಡಿಲ್ಲವೆಂದರೆ ನೀವು ಅದಕ್ಕೆ ಕಾಲಕಾಲಕ್ಕೆ ಯುಬಿಲೈಜೇಶನ್ ಸರ್ಟಿಫಿಕೇಟ್ ಕೊಡುತ್ತಿಲ್ಲ; ಮಾಹಿತಿಗಳನ್ನು ಕೊಡುತ್ತಿಲ್ಲ. ಹಿಂದಿನ ಕಂತುಗಳು ಬಿಡುಗಡೆಯಾದಾಗ ಯಾವ್ಯಾವಾಗ ಅದನ್ನು ಯುಟಿಲೈಜ್ ಮಾಡಲಾಗಿದೆಯೆಂದು ವಿವರವನ್ನು ಕೊಟ್ಟಿದ್ದೀರಾ? ಹಾಗೆ ಕೊಟ್ಟಿದ್ದರೆ ಅದಕ್ಕೇನು ಉತ್ತರಗಳು ಬಂದಿವೆ? ನಾನು ಹೆಚ್ಚೇನೂ ಹೇಳುತ್ತಿಲ್ಲ. ಇವತ್ತಿನ ಪ್ರಜಾವಾಣಿಯಲ್ಲಿ ನಿಮ್ಮ ಸರ್ಕಾರ ಏನು ಮಾಡುತ್ತಿದೆ ಎಂದು ಬಂದಿದೆ. "ಪ್ರಕೃತಿ ವಿಕೋಪ ಪರಿಹಾರನಿಧಿಯಲ್ಲಿ 57.72 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿತ್ತು. ಅದನ್ನು ರಾಜ್ಯ ಸರ್ಕಾರ ಸಂಪೂರ್ಣ ಬಳಸಿಲ್ಲವಾದ ಕಾರಣ ರಾಷ್ಟ್ರೀಯ ಪ್ರಕೃತಿ ವಿಕೋಪ ನಿಧಿಯಿಂದ ಹಣ ಬಿಡುಗಡೆ ಮಾಡಲು ಸಾಧ್ಯವಿಲ್ಲ"ವೆಂದು ಲೋಕಸಭೆಯಲ್ಲಿ ಹೇಳಿದ್ದಾರೆ. ಇದರಿಂದ ನಿಮ್ಮ ಸರ್ಕಾರದ ದಕ್ಷತೆ ಎಷ್ಟಿದೆಯೆಂಬುದು ಗೊತ್ತಾಗುತ್ತದೆ. ನಾನು ಕೇಳುತ್ತಿರುವುದೂ ಇದನ್ನೇ. ಕಾಗೋಡು ತಿಮ್ಮಪ್ಪನವರೂ ಇದನ್ನು ಸತ್ಯಸಂಗತಿ ಎಂದು ಒಪ್ಪುತ್ತಾರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ : ನಮ್ಮ ಸರ್ಕಾರದ ದಕ್ಷತೆ ಇರಲಿ, ಇವರ ಸರ್ಕಾರ ಅಲ್ಲಿಂದ ಹಣ ಬಿಡುಗಡೆ ಮಾಡುವುದರಲ್ಲಿ ದಕ್ಷತೆ ಎಷ್ಟಿದೆ ಎಂಬುದು ಇದರಲ್ಲಿ ಕಾಣುವುದಿಲ್ಲವೇ?

ಶ್ರೀ ಡಿ. ಎ. ಸದಾನಂದಗೌಡ : ತಾವು ಹಿರಿಯ ಸಚಿವರು, ತಮ್ಮ ಅನುಭವದಷ್ಟು ನನ್ನ ಪ್ರಾಯ ರಾಜಕಾರಣದಲ್ಲಿಲ್ಲ. ಆದರೂ ನನ್ನ ಅಂದಾಜು, ಇವತ್ತು ನಿಮ್ಮ ಸರ್ಕಾರ ನಡೆದುಕೊಳ್ಳುವ ರೀತಿ, ಏನಿದೆ ಅದು ಸರಿ ಇಲ್ಲ ಕೇಂದ್ರ ಸರ್ಕಾರದ ಅನುದಾನಕ್ಕೆ ಕಾಲಕಾಲಕ್ಕೆ ಯುಟಿಲೈಜೇಷನ್ ಸರ್ಟಿಫಿಕೇಟ್ ನೀಡದ ಕಾರಣವೇ ಹೀಗಾಗಿದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಇದೇನು ಕಾಂಟ್ರಾಕ್ಟ್ ಕೆಲಸ ಕೆಟ್ಟುಹೋಯಿತೇ? ಖರ್ಚುಮಾಡಿದ್ದಕ್ಕೆ ಕೊಡುವುದು? ಅನುದಾನ ಬರುತ್ತದೆ, ಬಿಡುಗಡೆ ಮಾಡಿ ಹಂಚಿದ್ದೇವೆ.

ಶ್ರೀ ಡಿ.ಎ. ಸದಾನಂದಗೌಡ: ನೀವು ಸರಿಯಾಗಿ ದಕ್ಷತೆಯಿಂದ ಹಂಚಿಕೆ ಮಾಡಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಸರಿಯಾಗಿ ಹಂಚಿಕೆ ಮಾಡಿಲ್ಲ ಎಂದರೆ? ಏನು ಸೊಟ್ಟ ಸೊಟ್ಟವಾಗಿ ಮಾಡಿದ್ದೇವಾ?

ಶ್ರೀ ಡಿ.ಎ. ಸದಾನಂದಗೌಡ: ಆ ಅಂಕುಡೊಂಕಾಗಿ ಮಾಡಿದ ಕಾರಣವೇ ಇದು. ಒಂದೊಂದು ತಾಲ್ಲೂಕಿನಲ್ಲಿ 200, 300 ಜನ; ಈ ರಾಷ್ಟ್ರೀಯ ಕುಟುಂಬ ಸಹಾಯಧನದ ಉದ್ದೇಶವೇನು? ಯಾವುದಾದರೂ ಕುಟುಂಬದಲ್ಲಿ ಆದಾಯ ತರುತ್ತಿದ್ದ ವ್ಯಕ್ತಿ ಮೃತಪಟ್ಟಾಗ ಅವನಿಗೆ ಕೊಡಬೇಕು, ಅದಕ್ಕೆ ರಕ್ಷಣೆ ಕೊಡಬೇಕು ಎಂಬುದು. ಸರ್ಕಾರ ಸ್ವಲ್ಪ ಒತ್ತಾಯ ಮಾಡಲಿ ಇವರ ಒತ್ತಾಯಗಳು ಕಡಿಮೆ ಇದ್ದ ಕಾರಣವೇ ಇದು ಆಗಲಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ಮಾಡಿದ್ದೇವೆ. ಆದಷ್ಟು ಜಾಗ್ರತೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಆಯಿತು ಈಗ ಒಂದೂವರೆ ಗಂಟೆವರೆಗೂ ವಿತ್ತೀಯ ಕಾರ್ಯಕ್ರಮ, ಅನಂತರ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಂದ ಮೂರನೇ ಮಹಡಿಯಲ್ಲಿ ಊಟವಿದೆ, ಅಲ್ಲಿಂದ ಬಂದು ಮತ್ತೆ 3 ಗಂಟೆಗೆ ಸೇರುತ್ತೇವೆ.

(5) ವಿತ್ತೀಯ ಕಾರ್ಯಕಲಾಪಗಳು

ವಿಷಯ: 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಅಧ್ಯಕ್ಷರೇ, ಈಗ ಸರ್ಕಾರ ಮಂಡಿಸಿರುವ ಆಯವ್ಯಯ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡಲು, ಯಾರೂ ಸಚಿವರೇ ಇಲ್ಲ ಸ್ವಾಮಿ ತೋಟಗಾರಿಕೆ ಸಚಿವರಿಲ್ಲ, ಕೃಷಿ ಸಚಿವರಿಲ್ಲ, ಗ್ರಾಮೀಣಾಭಿವೃದ್ಧಿ ಸಚಿವರಿಲ್ಲ, ಪಶುಸಂಗೋಪನೆ ಯಾವ ಸಚಿವರೂ ಇಲ್ಲ ಸ್ವಾಮಿ. ಸಚಿವರಿದ್ದಿದ್ದರೆ ನಾವು ಮಾತನಾಡಿದ್ದನ್ನು ನೋಟ್ ಮಾಡಿಕೊಂಡು ಉತ್ತರ ಕೊಡುತ್ತಿದ್ದರು. ಈಗ ಯಾರೂ ಇಲ್ಲ.

ಅಧ್ಯಕ್ಷರು: ನಾಡಗೌಡರೇ, ಸಂಬಂಧಪಟ್ಟ ಸಚಿವರನ್ನು ಕರೆಸಿ.

ಶ್ರೀ ಎಸ್.ಎಸ್. ಪಾಟೀಲ್ : ನೊಂದ ಮನಸ್ಸಿನಿಂದ ಹೇಳುತ್ತೇವೆ: ನಿಜವಾಗಿ ಈ ಸರ್ಕಾರಕ್ಕೆ ಈ ಸದನದ ಬಗ್ಗೆ ಗೌರವವಿಲ್ಲ. ಆ ಸದನದಲ್ಲಿ ಎಲ್ಲಾ ಮುಗಿದ ಮೇಲೆ ಇಲ್ಲಿ ನಡೆಯುತ್ತದೆ. ಎಲ್ಲರೂ ಅಲ್ಲಿರುತ್ತಾರೆ. ಅದೇನೋ ನಮಗರ್ಥವಾಗುತ್ತಿಲ್ಲ. ತಾವಿದನ್ನು ದೀರ್ಘವಾಗಿ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಸಚೇತಕರು) : ಅಧ್ಯಕ್ಷರೇ, ಯಾರಿಗೇ ಆಗಲಿ ಅಗೌರವ ಸೂಚಿಸುವುದಾಗಲೀ ಇಲ್ಲ.